**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 67/2024**

ಸಿ ಡಬ್ಲ್ಯೂ –8

ಪಿ ಡಬ್ಲ್ಯೂ–8

| | | |
|---|---|---|
| **ಸಾಕ್ಷಿದಾರರ ಹೆಸರು** | : | ಪ್ರಕಾಶ |
| **ತಂದೆ/ಗಂಡನ ಹೆಸರು** | : | ಹೊಸುರಪ್ಪ ಕೆರೂಡಿ |
| **ವಯಸ್ಸು** | : | 32 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ಹುಲ್ಲತ್ತಿ |

**ದಿನಾಂಕಃ 09–07–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು 3 ವರ್ಷದ ಹಿಂದೆ ರಾಣೇಬೆನ್ನೂರಿನ ಕೆ ಎಫ್ ಸಿ ಎಫ್ ಗೋಡಾನ್ ನಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದಾಗ ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ಒಂದು ಲಾರಿಯಲ್ಲಿ 335 ಅಕ್ಕಿ ಚೀಲಗಳನ್ನು ಲಾರಿಯಿಂದ ಕೆಳಗೆ ಇಳಿಸಲು ನನ್ನನ್ನು ಹಾಗೂ ಇನ್ನಿತರ ಕೆ ಎಫ್ ಸಿ ಎಫ್ ಹಮಾಲರಾದ ಚಾಸಾ–6,7,9,10 ರವರನ್ನು ಕರೆದರು. ಸದರಿ ಚೀಲವನ್ನು ಆರೋಪಿತ ಕಳುವು ಮಾಡಿಕೊಂಡು ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದನು ಎಂದು ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ತಿಳಿಸಿದರು. ಸದರಿ ಚೀಲಗಳು 50 ಕೆಜಿಯ ಒಟ್ಟು 335 ಚೀಲಗಳು ಇದ್ದವು. ಆಗ ನಾವು ಅಕ್ಕಿ ಚೀಲಗಳನ್ನು ಕೆಳಗೆ ಇಳಿಸಿರುತ್ತೇವೆ. ಆಗ ನ್ಯಾಯಾಲಯದ ಮುಂದಿರುವ ಆರೋಪಿತ ಸ್ಥಳದಲ್ಲಿದ್ದರು. ಸದರಿ ಅಕ್ಕಿ ಕಳ್ಳತನದಿಂದ ತೆಗೆದುಕೊಂಡು ಬಂದ ಅಕ್ಕಿ ಎಂದು ಹೇಳಿರುತ್ತಾರೆ. ಸದರಿ ಅಕ್ಕಿ ಚೀಲಗಳನ್ನು ಗೋಡಾನ್ ನಲ್ಲಿ ಇಳಿಸಿರುತ್ತೇವೆ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಸಿ ಡಬ್ಲ್ಯ್ಯೂ -8

ಪಿ ಡಬ್ಲ್ಯ್ಯೂ-8

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ದಿನಾಂಕ 14.06.2022 ರಂದು ಮುಂಜಾನೆ 11.30 ಗಂಟೆಗೆ ಚಾಸಾ-1,4 ರವರು ನನಗೂ ಹಾಗೂ ಚಾಸಾ-5 ರಿಂದ 10 ರವರನ್ನು ಕರೆದು ಗಂಗಾಪುರ ರಸ್ತೆಯ ಕೊಟ್ಟೂರೇಶ್ವರ ಮಠದ ಹತ್ತಿರ ಬರಲು ತಿಳಿಸಿದರು ಎಂದರೆ ಸರಿ. ಲಾರಿಯಲ್ಲಿ ಪಡಿತರ ಅಕ್ಕಿ ಇದೆ ಅಕ್ಕಿಯನ್ನು ಅನಲೋಡ್ ಮಾಡಲು ಹೇಳಿದರು ಎಂದರೆ ನಿಜ. ಲಾರಿಯಲ್ಲಿ 335 ಅಕ್ಕಿ ಚೀಲಗಳು ಇದ್ದವು ಎಂದರೆ ಸರಿ. ಅದರಲ್ಲಿ ಸ್ವಲ್ಪ ಅಕ್ಕಿಯ್ನು ಶ್ಯಾಂಪಲ್ ಗಾಗಿ ತೆಗೆದುಕೊಂಡರು ಎಂದರೆ ಸರಿ. ಸದರಿ ಲಾರಿಯನ್ನು ಆರೋಪಿತ ಚಲಾಯಿಸಿಕೊಂಡು ಬಂದನು ಎಂದರೆ ಸರಿ. ನಾವು ಅಕ್ಕಿ ಚೀಲವನ್ನು ಲೋಡ್ ಮಾಡುವಾಗ ದೀಪಕ್ ರವರು ಅಲ್ಲಿಯೇ ಎಂದರೆ ಸರಿ. ಸದರಿ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಿಜ.

**ಪಾಟೀ ಸವಾಲು : ಆರೋಪಿತನ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ನಾನು ಕೆ ಎಫ್ ಸಿ ಎಸ್ ಗೋಡಾನ್ ನಲ್ಲಿ ಸುಮಾರು 11 ವರ್ಷಗಳಿಂದ ಖಾಯಂ ಆಗಿ ಹಮಾಲಿಯಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಚಾಸಾ-1 ರಿಂದ 4 ರವರು ಸದರಿ ಲಾರಿಯನ್ನು ಗೋಡಾನ್ ತಂದರು ಎಂದರೆ ನಿಜ. ಸದರಿ ಲಾರಿಯನ್ನು ಆರೋಪಿತ ಚಲಾಯಿಸಿಕೊಂಡು ಬಂದರು ಎಂದರೆ ನಿಜ. ಆರೋಪಿತ ಆ ಸಮಯದಲ್ಲಿ ಅಕ್ಕಿ ಚೀಲಗಳನ್ನು ಖರೀದಿ ಮಾಡಿದ ಬಗ್ಗೆ ಬಿಲ್ಲನ್ನು ಅಧಿಕಾರಿಗಳು ಹಾಗೂ ಆಹಾರ ನೀರಿಕ್ಷಕರಿಗೆ ತೋರಿಸುತ್ತಿದ್ದರು ಎಂದರೆ ನಿಜ. ರಶೀದಿ ತೋರಿಸಿ ಆರೋಪಿತ ಎನು ಮಾಡುತ್ತಿದ್ದ ಎಂದು ನನಗೆ ಗೊತ್ತು. ಗೋಡಾನ್ ಮ್ಯಾನೇಜರ್ ಗೆ ಆರೋಪಿತ ರಶೀದಿ ಬಿಲ್ಲುಗಳನ್ನು ತೋರಿಸುತ್ತಿದ್ದ ಎಂದರೆ ನಿಜ. ಚೀಲಗಳನ್ನು ಇಳಿಸುವಾಗ ಆರೋಪಿತ ಅಲ್ಲಿಯೇ ಇದ್ದರು ಎಂದರೆ ನಿಜ. ನಾನು ಪೋಲಿಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ನನಗೆ ಅದು ಯಾವ ಅಕ್ಕಿ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.